Reg No. B G 155 5-3-1969

52 nd Year of Publication

SATYAVADI Daily, MYSORE 4

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೇವೆಚ್ಚ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ.

ಸ್ಥಾಪಕರು : ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಸೆ

ಪಾಕಿಸ್ತಾನ ಅಧಿಕ ಅಯೂಬರ ಪದಚ್ಯುತಿಯೆ ?

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಕೆನ್ಯಾ ರವರು, ಶ್ರೀ ಎಂ. ಬಿ. ಬಸವಯ್ಯನವರು, ಆಸೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ॥ ಎಂ.ಸಿ ಮೋದಿಯವರು ಡಾ ॥ ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಕೋ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯಪೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಅದರ ವಿಜ್ಞಾಪನೆಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವುದೆಂದು ಆಶಿಸಿ, ಕೃತಜ್ಞತಾಪೂರ್ವವಂದಿಸುತ್ತೇವೆ

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

ಡಾ ॥ ನಾಗಪ್ಪ ಆಳ್ವರು

ಎಂ ಪಿ ಸಿ ಸಿ ಅಧ್ಯಕ್ಷರಾದ ಡಾ ॥ ನಾಗಪ್ಪ ಆಳ್ವರವರು ತಾ॥ 9 ರಂದು ಯುಗೊಸ್ಲೋವಿಯಕ್ಕೆ ಪ್ರಯಾಣ ಮಾಡುತ್ತಾರೆ; ಅಲ್ಲಿನ ಪೆನುಂಬ್ರಾ ಒಕ್ಕೂಟದ ಸ್ವರ್ಣ ಮಹೋತ್ಸವದಲ್ಲಿ ಭಾಗವಹಿಸಲು.

★

ಶಾಸಕನ ದುರವಸ್ಥೆ

ತ್ರಿವೇಂದ್ರಂ— ಮಾರಕ್ಸಿಸ್ಟ್ ಪಾರ್ಟಿ ಭಿಟ್ಟ ಶಾಸಕ ಶ್ರೀ ಕೆ ಎಸ್ ನಾಯರ್ ತನಿಗೆ ಮೋರ್ಕ್ಯಸಿಸ್ಟರಿಂದ ಪ್ರಾಣಭಯವಿರುವುದೆಂದೂ, ರಕ್ಷಣೆ ಕೊಡಬೇಕೆಂದೂ ಶಾಸನ ಸಭೆಯಲ್ಲಿ ತಿಳಿಸಿದಾಗ, ಸ್ಪೀಕರರು ರಕ್ಷಣೆ ಕೊಡುವಂತೆ ಮುಖ್ಯಮಂತ್ರಿಗಳಿಗೆ ತಿಳಿಸಿದರು — ಆವರು ಪೋಲೀಸು ಇನ್ಸ್ಪೆಕ್ಟರು ಜನರಲ್ಲರಿಂದ ಪಡೆಯುವುದೆಂದರು.

★

ಡಾಕ್ಟರುಗಳ ಮುಷ್ಕರ

ಹೈದರಾಬಾದು, ವಾರಂಗಲ್, ವಿಶಾಖಪಟ್ಟಣ, ಗುಂಟೂರು, ಕಾಕಿನಾಡಾಗಳಲ್ಲಿ ಹೌಸ್‌ಸರ್ಜನ್ನರು, ಹೆಚ್ಚು ಸಂಬಳಕ್ಕಾಗಿ ಮುಷ್ಕರ ಹೂಡಿರುವರು.

○

ಶ್ರೀ ಶೃಂಗೇರಿ ಜಗದ್ಗುರುಗಳವರು

ಈಗ ಕೇರಳದಲ್ಲಿ ಪ್ರವಾಸ ಮಾಡುತ್ತಿರುವ ಶೃಂಗೇರಿಜಗದ್ಗುರುಗಳವರು ಮಾರ್ಚಿ 22 ರಂದು ನಗರಕ್ಕೆ ಆಗಮಿಸಿ ಮಾ. 25 ರವರೆಗೆ ಬಿಡಾರ ಮಾಡುತ್ತಾರೆ.

★

ಚೀಣಾ – ರಷ್ಯಾ

ಟೋಕಿಯೋ— ಚೀನಾ ಪಾವು ದ್ವೀಪದಲ್ಲಿ ಭಾನುವಾರ ಚೀನಾ–ರಷ್ಯಾ ಗಡಿ ರಕ್ತಪಾತ ಘರ್ಷಣೆಗೆ ರಷ್ಯಾ ಮಾದರೀ ಪಿತೂರಿ ಮಾಡಿತ್ತೆಂದು ಚೀನಾ ಆರೋಪಿಸಿದೆ.

●

ಅವಿರೋಧ

ಮದರಾಸು— ಶ್ರೀಮತಿ ರಾಣಿ ಅಣ್ಣಾದೊರೈ ವಿರುದ್ಧ ಯಾರೂ ಸ್ಪರ್ಧಿಸಿಲ್ಲವಾಗಿ ಅವರು ಕೆಗ್ಗುಳುನಾಡು ವಿಧಾನ ಪರಿಷತ್ತಿಗೆ ಅವಿರೋಧವಾಗಿ ಆಯ್ಕೆಯಾಗುವುದು.

ಪಾಕಿಸ್ತಾನದಲ್ಲಿ

ಢಾಕಾ— ಪೂರ್ವ ಪಾಕಿಸ್ತಾನದಲ್ಲಿ ತಮ್ಮ ವಿದ್ಯಾಭ್ಯಾಸಕ್ಕೆ ಹೆಚ್ಚು ಸೌಕರ್ಯದ ಕೇಳಿಕೆಯ ಒತ್ತಾಯಕ್ಕಾಗಿ ವಿದ್ಯಾರ್ಥಿ ಕಾರ್ಯಾಚರಣ ಸಮಿತಿ ನಿನ್ನೆ ಕರೆದಿದ್ದ ಸಾರ್ವತ್ರಿಕ ಮುಷ್ಕರೆ ಮತ್ತು ಹರತಾಳ ಯಶಸ್ವಿಯಾಗಿ ನಡೆಯಿತು; ಕೆಲವು ಪಟ್ಟಣಗಳಲ್ಲಿ ಕರ್ಫ್ಯೂ ಜಾರಿಮಾಡಲಾಗಿತ್ತು — ಪಶ್ಚಿಮ ಪಾಕಿಸ್ತಾನದಲ್ಲಿ ಡಾಕ್ಟರುಗಳು ಮುಷ್ಕರಿಸಿರುವರು — ಪಾಕಿಸ್ತಾನದ ಬಹು ಭಾಗಗಳು ಅಂಜೀ ಮುಷ್ಕರಕ್ಕೆ ತುತ್ತಾಗಿದೆ.

○

ಲಾಠಿ ಛಾರ್ಜ್

ಮಧುರೈ— ಜಲ್ಲಾ ಮ್ಯಾಜಿಸ್ಟ್ರೇಟರ ಕೋರ್ಟಿನಿಂದ ಕೇಂದ್ರ ಜೈಲಿಗೆ ಪೋಲೀಸು ಲಾರಿಯಲ್ಲಿ, ವಿಚಾರಣೆಗೆ ಒಳಗಾಗಿರುವ ಕಾಂಗ್ರೆಸ್ ಯುನಕ ನಾಯಕ-ನೇಡಮರಾನನನ್ನು ಸಾಗಿಸುತ್ತಿದ್ದಾಗ ಅಡ್ಡಕಟ್ಟಿನ ಭಾರಿ ಪ್ರದರ್ಶನಕಾರರ ಗುಂಪನ್ನು ಚದುರಿಸಲು ಪೋಲೀಸರು ಲಾಠಿ ಛಾರ್ಜು ಮಾಡಿದರು — 43 ಮಂದಿ ಗಾಯಗೊಂಡರು.

★ಗೌಹತಿ— ಬಸ್ಸೊಂದು ಗುಡ್ಸ್ ರೈಲಿನ ಎಂಜಿನ್ನಿಗೆ ಬಡಿದು, 4 ಮಂದಿ ಸತ್ತರು - ರ ಪರಿಹಾರ ನೀಡಬೇಕೆಂದು ವಿನಂತಿಸಿತು.

ಅಯೂಬರು

ಜಮ್ಮು— ಪಾಕಿಸ್ತಾನದ ಜನರು ಅಧ್ಯಕ್ಷ ಅಯೂಬರ ಆಡಳಿತ ಕೊನೆಗಾಣಿಸಲು ನಿರ್ಧರಿಸಿರುವರೆಂದು ಕಾಶ್ಮೀರ ಶಾಸನ ಸಭಾ ಸದಸ್ಯ ಷಾಮಿ ಅಹಮದ್ ಷಹಾಮಿಮಂ ಹೇಳಿದರು - ಇವರು ಪಾಕಿಸ್ತಾನದಲ್ಲಿ ಒಂದು ವಾರ ಇದ್ದು ಬಂದಿರುವರು

●

ಗೋಳೀಬಾರು

ಬೊಂಬಾಯಿ— ಘಾಡಪಡೇವ್ ಹತ್ತಿರ ಕಲ್ಲಿಸಶದಲ್ಲಿ ಮಗ್ನವಾಗಿದ್ದ ಎರಡು ವಿರುದ್ಧ ಗುಂಪುಗಳನ್ನು ಚದುರಿಸಲು ಪೋಲೀಸರು ಗುಂಡುಹಾರಿಸಿದರು – ಒಬ್ಬ ಸತ್ತು ಇಬ್ಬರು ಗಾಯಗೊಂಡರು.

★

ಶಿವಸೇನಾ ಖಂಡನೆ

ಸಿಸಿ— ದಂಡೇಲಿಯಲ್ಲಿ ತಾ॥ 2 ರಂದು ನಡೆದ ಕಾರವಾರ ಜಿಲ್ಲಾ ಕಾಂಗ್ರೆಸ್ ಸಮಿತಿ ವಿಾಟಿಂಗಿನಲ್ಲಿ ಬೊಂಬಾಯಿನಲ್ಲಿ ಶಿವಸೇನಾ ನಡೆಸಿದ ರಾಕ್ಷಸೀ ಅತ್ಯಾಚಾರವನ್ನು ಖಂಡಿಸಿ, ಸಲಭೆಯಲ್ಲಿ ಆಸ್ತಿಪಾಸ್ತಿ ಕಳೆದುಕೊಂಡವರಿಗೆ ಮಹಾರಾಷ್ಟ್ರ ಸರಕಾರ ಪರಿಹಾರ ನೀಡಬೇಕೆಂದು ವಿನಂತಿಸಿತು.

.... 7_3_69 ರಿಂದ ಅಮೋಘ ಆರಂಭ ....

ಮೆಹಮೂದ್ ನಿಮ್ಮನ್ನು ನಗೆಗಡಲಿನಲ್ಲಿ ಮುಳುಗಿಸುವಂತೆ ಮಾಡುವ
ಅತ್ಯುತ್ತಮ ಸಂಗೀತಮಯ ಹಿಂದಿ ಚಿತ್ರ

ಪಡೋಸನ್ (ಕಲರ್‌ನಲ್ಲಿ)

ಪಾತ್ರ–ಸುನೀಲ್‌ದತ್, ಕಿಶೋರ್‌ಕುಮಾರ್, ಸಯಿರಾ ಬಾನು ಮುಂತಾದವರು
ದಿಗ್ದರ್ಶನ : ಜ್ಯೋತಿ ಸ್ವರೂಪ್ — ಸಂಗೀತ : ಆರ್. ಡಿ. ಬರ್ಮನ್

ಒಲಂಪಿಯಾ ಮತ್ತು ಶ್ರೀ ಚಿತ್ರಮಂದಿರಗಳಲ್ಲಿ
ದಿನ : 2-30, 6 ಮತ್ತು 9-30 ಕ್ಕೆ ದಿನ : 3, 6-30 10 ಕ್ಕೆ

ಒಲಂಪಿಯಾ ಚಿತ್ರಮಂದಿರದಲ್ಲಿ ತಾ॥ 7, 8 ಮತ್ತು 9 ರಂದು ಬೆಳಿಗ್ಗೆ 10 30 ಕ್ಕೆ
ವಿಶೇಷ ಬೆಳಗಿನ ಪ್ರದರ್ಶನ ರಿಗ್ಯುಲರ್ ಷೋ ದರದಲ್ಲಿ

ಪಾಪಿ ಬೇಯಿಸಿದ ಆಹಾರ ತಿನ್ನುವದರಿಂದ

ಹಜರತ್ ಇಬ್ರಾಹಿಂರವರಿಗೆ, ನಿಜವಾಗಿ ಧಾರ್ಮಿಕ ಮನಸ್ಸುಳ್ಳವನಾಗಿ, ದೇಶ ಭಕ್ತನಾಗಿದ್ದ ಒಬ್ಬ ಯುವಕನು, ಅತೀವ ಕಾಮಾಸಕ್ತನಾಗಿ ಸರಿಯಲ್ಲದ ನಡತೆ ಪ್ರದರ್ಶಿಸುತ್ತಿರುವದು ಕಂಡುಬಂದಿತು. ಹೀಗಾಗಿರುವುದು ದೈವೇಚ್ಛೆಯಿಂದಲೋ ಸೈತಾನನ ಕಾರ್ಯವೋ ಎಂಬುದನ್ನು ಪರೀಕ್ಷಿಸಲು, ಆ ಯುವಕನು ಸೇವಿಸುತ್ತಿರುವ ಆಹಾರದ ಗುಣಗಳು ಮತ್ತು ಪ್ರಮಾಣ ತಯಾರಿಕೆಯ ವಿಷಯ ವಿಚಾರಿಸಿದರು. ಆಹಾರ ತಯಾರಿಸಿ ಬಡಿಸುತ್ತಿರುವನು ವೇಶ್ಯಾಲಂಪಟನಾಗಿರುವದೂ ಮದ್ಯಪಾಯಿಯಾಗಿರುವುದೂ, ಇತರ ಕೆಟ್ಟ ಚಾಳಿಯವನಾಗಿರುವುದೂ ಗೊತ್ತಾಯಿತು. ಈ ಯುವಕನ ವಿಚಿತ್ರ ನಡತೆಗೆ, ಆ ದುರ್ಗುಣದ ದುಸ್ಸಾಡಿಕೆಯ ಮನುಷ್ಯನು ತಯಾರಿಸುತ್ತಿರುವ ಆಹಾರ ಸೇವನೆಯೇ ಕಾರಣವೆಂದು ಕೂಡಲೇ ಘೋಷಿಸಿದರು. ಆ ಸೇವಕನನ್ನು ತೆಗೆದುಹಾಕಿ, ಭೇಟಿ ಸರಿಯಾದವನನ್ನು ಆಹಾರ ತಯಾರಿಸಲು ನೇಮಿಸಿದೊಡನೆ, ಇವೆಲ್ಲ ಮಾಯವಾಯಿತು. ಪಾಪವೂ ಪುಣ್ಯವೂ ಒಬ್ಬನಿಂದ ಒಬ್ಬನಿಗೆ ಒದಗುವವು.

ಗಾಂಧೀ ವಾಣಿ

ವಿದ್ಯಾರ್ಥಿಗಳು ರಾಜಕೀಯದಿಂದ ದೂರವಿರಬೇಕು

ದೇವರೇ ಸತ್ಯ : ಸತ್ಯವೇ ದೇವರು.

Golden Jubilee of 'Satyavadi'

The golden jubilee of the 'Satyavadi' is to be celebrated very soon

The President, the Prime Minister, H H. the Maharaja of Mysore and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, sri M. B. Basaviah. Sri Madhav Shenoi Sri Opera Talkies, Padmabhushana Dr. M.C. Modi, Dr. R. S. Nanjunda Swamy (Glasgow) Sri Ananthanarasimha Iyengar (Honganur) have generously extended donations and best wishes

It iswelknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and graeing the occasion with presence, are fervently solicited with grateful thanks.

Editor, 'Satyavadi' Chamarajapuram, Mysore: 4.



Protectthe Cow

ಪುಡ್‌ಲಾಂಡ್ಸ್ 28-2-69 ರಿಂದ

ಅಮೋಘ ಆರಂಭ

— ಚಿತ್ತಾಕರ್ಷಕ ಸಾಂಸಾರಿಕ ಹಿಂದಿ ಚಿತ್ರ —

ಘರ್ ಕಾ ಚಿರಾಗ್

ಪಾತ್ರ— ಧರ್ಮೇಂದ್ರ್, ಬಿಶ್ವಜಿತ್, ವಹೀದಾ ರಹಿಮಾನ್,
ಬಾಲರಾಜ್ ಸಹಾನಿ, ದೇವ್ ಕುಮಾರ್

ನಿರ್ದೇಶನ : ಜಗದೀವ್ — ಸಂಗೀತ : ಮದನ್ ಮೋಹನ್

[ದಿನ 3 ಪ್ರದರ್ಶನಗಳು]

ಆಪೆರಾ 28-2-69 ರಿಂದ

— ಅತ್ಯಮೋಘ ಹಿಂದಿ ಚಿತ್ರ —

ಪರಿವಾರ್

ಮನರಂಜನ ತೆರಿಗೆ ಮನ್ನಾ ಮಾಡಿದೆ ಪೂರ್ಣರಂಜಿತ

ಪಾತ್ರ : ಜಿತೇಂದ್ರ ನಂದ, ರಾಜೇಂದ್ರನಾಥ್, ಓಂ ಪ್ರಕಾಶ್

.... ದಿನವಹಿ 3 ಆಟಗಳು ....

Quality Printing — Neat Binding

Lakshminarasimha Press

Sivarampet, Mysore

SHAKTI

SUDHA

A Superb Tonic

Help The Gorakshana

ಅಶೋಕ ಏಜೆನ್ಸೀಸ್

ಲಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಎಲ್ಲ ವಿಧ ಆಯುರ್ವೇದ ಔಷಧಗಳೂ ಸಗಟ್ಟಾಗಿ ದೊರೆಯುವ ಕಡೆ

Edited, Printed & Published by Dharmaprachara Nirata M. S Krishna Rao (Proprietor) at the Satyavad Press Chamarrajpuram. Mysoe 4.